ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು).—''೧೯೮೬ರ ಕರ್ನಾಟಕ ಸಂಚಾರಿ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.—''೧೯೮೬ರ ಕರ್ನಾಟಕ ಸಂಚಾರಿ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕ ಮೋಟಾರು ವಾಹನಗಳ (ತಿದ್ದುಪಡಿ) ವಿಧೇಯಕ ೧೯೮೬

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್.—೧೯೮೬ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಜೂರು ಮಾಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಮೆಟಡರ್ ವ್ಯಾನ್ಸ್ ಏನಿವೆ ಅವುಗಳಲ್ಲಿ ಈಗ ೬ ಪ್ಲಸ್ ೧ ಪ್ರಯಾಣಿಕರು ಮಾತ್ರ ಪ್ರಯಾಣ ಮಾಡಲು ಅವಕಾಶ ಇತ್ತು. ಈ ಗಾಡಿಗಳು ಹೈಯರ್ ಕೆಪಾಸಿಟಿ ಇರತಕ್ಕ ವಾಹನಗಳಾಗಿವೆ. ಇವುಗಳನ್ನು ಹೆಚ್ಚು ಉಪಯೋಗ ಮಾಡಿಕೊಳ್ಳುವ ಕಾರಣ ೧೨ ಪ್ಲಸ್ ೧ ಜನ ಕುಳಿತುಕೊಂಡು ಹೋಗತಕ್ಕದ್ದರ ಬಗ್ಗೆ ಅವಕಾಶ ಕಲ್ಪಿಸಿಕೊಡುವುದಕ್ಕೆ ತಿದ್ದುಪಡಿಯನ್ನು ತಂದಿದ್ದೇವೆ. ಹಿಂದೆ ಈ ಮೆಟಡರ್ ವ್ಯಾನ್‌ನ ಮಾಲೀಕರು ಸಂಪು ಸಡಿಸಿ ಸಮಗೆ ನಷ್ಟವಾಗುತ್ತಿದೆ. ಹೆಚ್ಚು ಜನರಿಗೆ ಇವುಗಳಲ್ಲಿ ಅವಕಾಶ ಕಲ್ಪಿಸಿಕೊಡಬೇಕೆಂದು ಹೇಳಿದರು. ಈ ಬಗ್ಗೆ ನೋಡಿ ತಿದ್ದುಪಡಿಯನ್ನು ತರುತ್ತೇನೆಂದು ಮಾನ್ಯ ಸಾರಿಗೆ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದರು. ಆದುದರಿಂದ ಈ ತಿದ್ದುಪಡಿಯನ್ನು ತಂದಿದ್ದು ಇದಕ್ಕೆ ಸಭೆ ಒಪ್ಪಿಗೆ ಸಿಗಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು —ಪ್ರಸ್ತಾವ ಏನೆಂದರೆ.—''೧೯೮೬ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ಮತ್ತು ೩.—

ಅಧ್ಯಕ್ಷರು.—''ಖಂಡ ೨ ಮತ್ತು ೩ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು (ಖಂಡ ೨ ಮತ್ತು ೩ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ.—

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.—

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾಪದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ೧೯೬೬ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

"೧೯೬೬ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಎಂತಲ್ಲಿ ಮಂಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಕಡಲ ಮೀನುಗಾರಿಕೆ (ವಿನಿಯಮ) ವಿಧೇಯಕ—೧೯೬೬

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿ. ಬೈರೇಗೌಡ (ಮೀನುಗಾರಿಕೆ ಮತ್ತು ಬಂದರುಗಳ ಮಂತ್ರಿ).—ಅಧ್ಯಕ್ಷರೇ, ೧೯೬೬ನೇ ಇಸವಿಯ ಕರ್ನಾಟಕ ಕಡಲ ಮೀನುಗಾರಿಕೆ (ವಿನಿಯಮನ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ನಮ್ಮ ಕರಾವಳಿಯ ಉದ್ದ ಸುಮಾರು ೩೦೦ ಕಿಲೋ ಮೀಟರ್ ಇದೆ. ಈ ೩೦೦ ಕಿಲೋ ಮೀಟರ್‌ನ ಕಾರ್ಟಿನೆಂಟಲ್ ಶೆಲ್ಫ್ ಲೆಕ್ಕ ಹಾಕಿದರೆ ಸುಮಾರು ೨೫ ಸಾವಿರ ಚದರ ಕಿಲೋಮೀಟರ್ ಪ್ರದೇಶದಲ್ಲಿ ಮೀನುಗಾರಿಕೆ ನಡೆಸತಕ್ಕ ಅವಕಾಶ ನಮ್ಮ ರಾಜ್ಯದಲ್ಲಿ ಇದೆ. ಆದರೆ ಮೀನುಗಾರಿಕೆ ಈಗ ತೀರದಲ್ಲಿ ಮಾತ್ರ ನಡೆಯುತ್ತಿದೆ. ಕಡಿಮೆ ದೂರದಲ್ಲಿ ಮೀನುಗಾರಿಕೆಗೆ ತೊಡಗಿರತಕ್ಕ ದೋಣಿಗಳ ಸಂಖ್ಯೆ ಅತಿ ಹೆಚ್ಚಾಗಿ ಪ್ರತಿ ದೋಣಿಗೆ ದೊರಕಬೇಕಾದ ಮೀನಿನ ಪ್ರಮಾಣ ಇರ್ಷ ವರ್ಷಕ್ಕೆ ಕಡಿಮೆಯಾಗುತ್ತಿರುವುದರಿಂದ ಮತ್ತು ಇವರು ಉಪಯೋಗಿಸತಕ್ಕ ಬಲೆಯ ಕಣ್ಣುಗಳಿಗೂ ಸಹಾ ಯಾವ ನಿಬಂಧನೆ ಇಲ್ಲದೇ ಇರುವ ಕಾರಣದಿಂದ ಮೀನಿನ ಸಂಪತ್ತು ನಾಶವಾಗುತ್ತಿದೆ.

(ಶ್ರೀ ಎಂ ಎಸ್. ನಾರಾಯಣರಾವ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇದು ಅನೇಕ ಮೀನುಗಾರರು ಬಡತನ ರೇಖೆಗಿಂತ ಮೇಲೇರದಿರಲು ಕಾರಣವಾಗಿದ್ದು ಈ ಮೀನುಗಾರಿಕೆಯನ್ನು ವೈಜ್ಞಾನಿಕ ಹಾಗೂ ಶಾಸ್ತ್ರೀಯವಾಗಿ ನಡೆಸುವುದು ಅವಶ್ಯಕವಿರುವುದರಿಂದ ಈ ತಿದ್ದುಪಡಿ ತರಲಾಗಿದೆ. ಇದು ಸರಳ ಹಾಗೂ ಅವಶ್ಯಕ ಮಸೂದೆಯಾಗಿದ್ದು ಇದರಿಂದ ರಾಜ್ಯದ ಮೀನುಗಾರಿಕೆಯಲ್ಲಿ ನಿಬಂಧನೆ ತಂದು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ತರುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಸನ್ಮಾನ್ಯ ಸದಸ್ಯರು ಸರ್ವಾನುಮತದ ಒಪ್ಪಿಗೆಯನ್ನು ಈ ವಿಧೇಯಕಕ್ಕೆ ಸೂಚಿಸಬೇಕೆಂದು ತಮ್ಮ ಮುಖಾಂತರ ಸಭೆಯಲ್ಲಿ ಇದನ್ನು ಮಂಡಿಸುತ್ತಿದ್ದೇನೆ.

† ಶ್ರೀ ಜಿ ಎಸ್. ಆಚಾರ್ (ಬೈಂದೂರ್).— ಸನ್ಮಾನ್ಯ ಅಧ್ಯಕ್ಷರೇ. ಕರ್ನಾಟಕ ಕಡಲ ಮೀನುಗಾರಿಕೆ ವಿಧೇಯಕವನ್ನು ಸರ್ಕಾರದವರು ವಿಧಾನ ಸಭೆಯ ಮುಂದೆ ಇಟ್ಟಿದ್ದಾರೆ, ಈ ಕುರಿತಾಗಿ ಕೆಲವು ನಿಯಂತ್ರಣವಾಗಬೇಕೆನ್ನುವ ಚಿಂತನೆ ಬಹಳ ಹಿಂದೆ ಕೂಡಾ ಹಿಂದಿನ ಸರ್ಕಾರದಲ್ಲಿ ಇತ್ತು. ಬಹುಶಃ ಅದನ್ನು ವಿಮರ್ಶಿಸಿ ಇಲ್ಲಿ ಇದನ್ನು ಇಟ್ಟಿದ್ದೀರೆಂದು ಕಾಣುತ್ತದೆ ಇವೊತ್ತು ಸರ್ಕಾರದ ಉದ್ದೇಶ ಏನೆಂದಿದೆ ? ಯಾಂತ್ರೀಕೃತ ಅಲ್ಲದೇ ಪರಂಪರಾಗತವಾಗಿ ಮೀನುಗಾರಿಕೆ ಮಾಡುತ್ತಿರುವವರು ಯಾಂತ್ರೀಕೃತ ದೋಣಿಗಳಲ್ಲಿ ಕೆಲಸ ಮಾಡುತ್ತಿರುವ ಮೀನುಗಾರರೊಡನೆ ಘರ್ಷಣೆ ಪಾಡುವುದನ್ನು ತಪ್ಪಿಸಬೇಕೆನ್ನುವುದು ವೈಜ್ಞಾನಿಕವಾಗಿ ಮೀನುಗಾರಿಕೆಯನ್ನು ಮುಂದುವರಿಸಬೇಕೆನ್ನುವುದು ಲೈಸೆನ್ಸ್ ಮತ್ತು ಎಲ್ಲೆಯನ್ನು ಗೊತ್ತು ಮಾಡಬೇಕೆನ್ನುವುದು ಈ ಅಧಿಕಾರಗಳನ್ನು ಇಲ್ಲಿ ಅಳವಡಿಸಲಾಗಿದೆ. ಈಕಡಲು ಬಹಳ ಉದ್ದವಾಗಿದೆ ಮತ್ತು ಮೀನುಗಾರಿಕೆ ಕೆಲವೇ ಕಡೆ ಕೇಂದ್ರೀಕೃತವಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ನಮ್ಮಲ್ಲಿ ಬಂದರುಗಳು, ಕೆಲವು ಕಡೆ ಅವಶ್ಯಕ ಬಂದರುಗಳು ಹೆಚ್ಚು ಇಲ್ಲದೆ ಇದ್ದು, ಇದರಿಂದ ಮೀನುಗಾರಿಕೆಯನ್ನು ಮಾಡುವುದಕ್ಕಾಗುವುದಿಲ್ಲ. ಆದುದರಿಂದ